ದೂರವಾಣಿ ಸಂಖ್ಯೆ: 080-23371691

**ಕರ್ನಾಟಕ ಸರ್ಕಾರ**

**(ವಿದ್ಯುತ್ ಪರಿವೀಕ್ಷಣಾಲಯ)**

ಸಂಖ್ಯೆ:ಮುವಿಪ/ಅಮುವಿಪ/ವಿಪ(ಪ)/ಅಧಿ/ 834-871 /2021-2022

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ,
ನಿರ್ಮಾಣ ಭವನ, 2ನೇ ಮಹಡಿ,
ಡಾ॥ ರಾಜ್‌ಕುಮಾರ್ ರಸ್ತೆ,
ರಾಜಾಜಿನಗರ 1ನೇ ಬ್ಲಾಕ್,
ಬೆಂಗಳೂರು-560010

ದಿನಾಂಕ: 13/07/2021

**<u>ಸುತ್ತೋಲೆ</u>**

ವಿಷಯ: ವಿದ್ಯುತ್ ಗುತ್ತಿಗೆದಾರರ ಪರವಾನಗಿ, ವಿಶೇಷ ತಂತಿ ರಹದಾರಿ, ವಿದ್ಯುತ್ ಮೇಲ್ವಿಚಾರಕರ ರಹದಾರಿ ಮತ್ತು ತಂತಿ ಕೆಲಸಗಾರರ ರಹದಾರಿ ಹೊಸದು/ನವೀಕರಣ ತಿರಸ್ಕೃತಗೊಂಡ ಅರ್ಜಿಗಳ ಜೊತೆ ಪಾವತಿಸಿರುವ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ.

**** **** ****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿಶೇಷ ತಂತೀ ಕೆಲಸಗಾರರ ರಹದಾರಿಗಳು, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ಕೆಲಸಗಾರರ ರಹದಾರಿಗಳು ಹೊಸದು/ನವೀಕರಣ ಅರ್ಜಿಗಳು ಉಪ ವಿದ್ಯುತ್ ಪರಿವೀಕ್ಷಕರ ಕಚೇರಿಯಿಂದ ತಿರಸ್ಕೃತಗೊಂಡ ನಂತರವೂ ಈಗಾಗಲೇ ಪಾವತಿಗೊಂಡಿರುವ ಶುಲ್ಕದ ಚಲನ್‌ಗಳನ್ನು ಹೊಸದಾಗಿ ಸಲ್ಲಿಸುವ ಅರ್ಜಿಗಳಿಗೆ ಸಂಯೋಜಿಸಿ(ಚಲನ್‌ಗಳನ್ನು ಅಪ್ ಲೋಡ್ ಮಾಡಿ) ಅರ್ಜಿಗಳನ್ನು ಕೇಂದ್ರ ಕಚೇರಿಗೆ ಕೆಲವು ಉಪ ವಿದ್ಯುತ್ ಪರಿವೀಕ್ಷಕರು ಸಲ್ಲಿಸುತ್ತಿರುವುದು ಕಂಡುಬಂದಿರುತ್ತದೆ.

ಮುಂದುವರೆದು ಒಮ್ಮೆ ಶುಲ್ಕ ಪಾವತಿ ಮಾಡಿ ಅರ್ಜಿಗಳು ತಿರಸ್ಕೃತಗೊಂಡಲ್ಲಿ ನಿಯಮಾನುಸಾರ ಸದರಿ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ, ಹೀಗೆ ಮುಟ್ಟುಗೋಲು ಹಾಕಿಕೊಳ್ಳಲಾಗಿರುವ ಶುಲ್ಕವನ್ನು ಹೊಸ ಅರ್ಜಿಗಳಿಗೆ ಸಂಯೋಜಿಸಿ ಅಂತಹ ಅರ್ಜಿಗಳನ್ನು ಕೇಂದ್ರ ಕಚೇರಿಗೆ ಸಲ್ಲಿಸಬಾರದಾಗಿ ಹಾಗೂ ಹೊಸದಾಗಿ ಸಲ್ಲಿಸುವ ಅರ್ಜಿಗಳಿಗೆ ಹೊಸದಾಗಿ ಶುಲ್ಕವನ್ನು ಅರ್ಜಿದಾರರು ಪಾವತಿಸಬೇಕೆಂದು ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರವರುಗಳು ಸಂಬಂಧಪಟ್ಟ ಅರ್ಜಿದಾರರಿಗೆ ತಿಳುವಳಿಕೆ ನೀಡಲು ಹಾಗೂ ಸದರಿ ನಿಯಮಗಳನ್ನು ತಾವುಗಳು ಸಹ ಕಟ್ಟುನಿಟ್ಟಾಗಿ ಪಾಲಿಸಲು ಈ ಮೂಲಕ ತಮಗೆ ಸೂಚಿಸಲಾಗಿದೆ.

13/7/2021

ಮುಖ್ಯ ವಿದ್ಯುತ್ ಪರಿವೀಕ್ಷಕರು(ಪ್ರಭಾರ)

ಪ್ರಭಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು,
ವಿದ್ಯುತ್ ಪರಿವೀಕ್ಷಣಾಲಯ,
ಬೆಂಗಳೂರು.

ಪ್ರತಿಯನ್ನು:

1. ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರವರುಗಳಿಗೆ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ.
2. ಕ.ಕ/ಮುಕ.